ಶ್ರೀ ಆರ್. ಅನಂತರಾಮ್.—ಅದನ್ನು ಮಾಡುವುದು ಸೂಕ್ತವಲ್ಲವೇ ?

ಡಾ॥ ಆರ್. ನಾಗನಗೌಡ.—ಈ ಸಂದರ್ಭದಲ್ಲಿ ಮಾಡುವುದು ಸೂಕ್ತವಲ್ಲವೆಂದು ಅಭಿಪ್ರಾಯಪಟ್ಟಿದೆ.

"Crop Protection" Service.

Q.—403. **Sri K. PRABHAKAR** (Nelamangala—Scheduled Castes).—

Will the Government be pleased to state :—

(*a*) how many applications were received in the Office of the Director of Agriculture for the service of "crop protection" especially garden and paddy crops that were subjected to scarcity of rainfall during 1954-55 ;

(*b*) what are the arrangements made to strengthen the work of the Agricultural Department in such cases ;

(*c*) whether the Department of Agriculture has not made provision for such unforeseen services ?

A.—**Dr. R. NAGAN GOWDA** (Minister for Agriculture).—

(*a*) 1,026.

(*b*) and (*c*) Plant Protection Assistants and Fieldmen are specially appointed in all the Districts, who work under the supervision and guidance of the Assistant Directors of Agriculture, the Government Entomologist and Plant Pathologist. Necessary action is also being taken year after year to augment the stock of equipment and chemicals to the extent of Budget provision.

ಶ್ರೀ ಕೆ. ಪ್ರಭಾಕರ್.—1,026 ಅರ್ಜಿಗಳಲ್ಲಿ ಯಾವಯಾವ ತೊಂದರೆಗಳಿಗೆ ಸಂಬಂಧಪಟ್ಟ ಅರ್ಜಿಗಳು ಎಷ್ಟೆಷ್ಟಿದ್ದುವೆಂಬುದನ್ನು ಹೇಳುತ್ತೀರಾ ?

ಅಧ್ಯಕ್ಷರು.—ಇಷ್ಟು ದೊಡ್ಡ ಸಂಖ್ಯೆಯಿರುವಾಗ ಹೇಗೆ ಹೇಳುವುದು ?

ಡಾ॥ ಆರ್. ನಾಗನಗೌಡ.—ನೋಟೀಸ್.

ಶ್ರೀ ಕೆ. ಪ್ರಭಾಕರ್.—ನೀರಿಲ್ಲದೆ ಬತ್ತದಬೆಳೆ ಒಣಗುತ್ತಿರುವಾಗ ಬತ್ತದ ಬೆಳೆಗೆ ಯಾವಯಾವ ರೋಗ ಬರುತ್ತದೆ ?

*ಡಾ॥ ಆರ್. ನಾಗನಗೌಡ.—ನೀರಿಲ್ಲದ ಕಾಲದಲ್ಲಿ ಬತ್ತದ ಬೆಳೆ ಒಣಗುತ್ತಾ ಬರುತ್ತದೆ. ಅದೇ ದೊಡ್ಡ ರೋಗ.

ಶ್ರೀ ಕೆ. ಪ್ರಭಾಕರ್.—ನೀರಿಲ್ಲದೆ ಒಣಗುವ ಪೈರಿಗೆ technical men ಸಹಾಯ ಮಾಡುತ್ತಾರೆಂದು ಹೇಳಿದ್ದೀರಿ. ಅವರೇನು ಸಹಾಯ ಮಾಡುತ್ತಾರೆ ?

ಡಾ॥ ಆರ್. ನಾಗನಗೌಡ.—ಮಳೆ ಕಡಮೆ ಯಾಗಿದ್ದರೆ ರಾಗಿ, ಜೋಳ ಆದರೆ inter-culture ಮಾಡುವುದರಿಂದ ಸ್ವಲ್ಪ ತಡೆಯುವುದಕ್ಕೆ ಸಾಧ್ಯವಾಗಬಹುದು. ಅಷ್ಟೇ ಹೊರತು, ಬೇರೆ ಯಾವ ರೀತಿಯಿಂದಲೂ ಸಹಾಯ ಮಾಡುವುದಕ್ಕಾಗುವುದಿಲ್ಲ. ಯಾವ ಸಂದರ್ಭದಲ್ಲಿ ಏನು ಮಾಡಬೇಕೆಂದು ಹೇಳಿದರೆ ಪರಿಶೀಲನೆ ಮಾಡುತ್ತೇನೆ.

12-30 P.M.

ಶ್ರೀ ಕೆ. ಪ್ರಭಾಕರ್.—ಒಂದೆರಡು ಹದ ನೀರನ್ನು ಹಾಯಿಸಲು ಯತ್ನವಿಲ್ಲದಂತಾಗಿ ಅಲ್ಲಲ್ಲಿ ನೂರಾರು ರೈತರು ಪಂಪ್‌ಸೆಟ್ಟುಗಳನ್ನಾದರೂ ಕೊಡಿ ಎಂದು ವ್ಯವಸಾಯದ ಇಲಾಖೆಗೆ ಅರ್ಜಿಹಾಕಿಕ್ಕೊಂಡಿದ್ದಕ್ಕೆ ಆ ಇಲಾಖೆಯವರು ಪಂಪ್‌ಸೆಟ್‌ಗಳು ಇಲ್ಲ ಎಂದು ಹೇಳುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

Dr. R. NAGAN GOWDA.—I suppose that also comes under crop protection and I may answer that. Is it diesel pump sets that you are asking about ?

Sri K. PRABHAKAR.—Any kind of arrangement that could be made available temporarily to protect the crop once or twice getting supply of water.

Dr. R. NAGAN GOWDA.—Whatever pump sets that are available, that is, oil engine pump sets, we readily give them to the cultivators, but we have not got a very large number of them.

ಶ್ರೀ ಕೆ. ಪ್ರಭಾಕರ್.—ಇಲ್ಲಿಯವರೆಗೆ ಆ ವ್ಯವಸಾಯದ ಇಲಾಖೆಯವರು ಸರಬರಾಯಿ ಮಾಡಿರುವಂಥ ಪಂಪ್ ಸೆಟ್‌ಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ ಅನ್ನುವುದಾದರೂ ತಮ್ಮ ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ನೋಟೀಸ್.

ಶ್ರೀ ಕೆ. ಪ್ರಭಾಕರ್.—ಹೀಗೆ ಸಕಾಲಕ್ಕೆ ಸರಿಯಾಗಿ ಸರ್ಕಾರದಿಂದ ರೈತರಿಗೆ ಸೌಲಭ್ಯಗಳು ಯಾವವೂ ದೊರೆಯದೆ ಅವರಿಗೆ ಆಗಿಂದಾಗ್ಗೆ ಲಕ್ಷಾಂತರ ರೂಪಾಯಿಗಳ ನಷ್ಟ ಆಗುತ್ತಿರುವ ಅಂಶ ತಮ್ಮ ಅವಗಾಹನೆಗೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ಈ ವರೆಗೆ ನಾವೂ ಸಹ ಎಷ್ಟೋ ಪಂಪ್ ಸೆಟ್‌ಗಳನ್ನು ರೈತರಿಗೆ ಒದಗಿಸಿದ್ದೇವೆ. ಆದರೆ ಈಗ ಆ ಅಗ್ರಿಕಲ್‌ಚರಲ್ ಇಲಾಖೆಯಲ್ಲೇನೋ ಈ ಮೆಷೀನ್‌ಗಳು ಇಲ್ಲ ಎಂದು ತಿಳಿದು ಬಂದಿದೆ. ಆದಾಗ್ಯೂ ಪಿ.ಡಬ್ಲ್ಯು.ಡಿ.ಯಿಂದ ಮತ್ತು ಇತರ ಲೋಕಲ್ ಬಾಡೀಸ್‌ಗಳಲ್ಲಿ ಕೆಲವು ಪಂಪ್ ಸೆಟ್‌ಗಳಿವೆ. ಅವರನ್ನು ಕೇಳಿದರೆ ಯಾರೂ ಇಲ್ಲ ಎಂದು ಹೇಳುವುದಿಲ್ಲ. ಅವರು ಅನೇಕ ಸಂದರ್ಭಗಳಲ್ಲಿ ಈ ಬೆಂಗಳೂರು ಜಿಲ್ಲೆಗೆ ಕೊಟ್ಟಿದ್ದಾರೆ.

ಶ್ರೀ ಕೆ. ಪ್ರಭಾಕರ್.—ಸಕಾಲದಲ್ಲಿ ರೈತರಿಗೆ ಸಹಾಯ ನೀಡುವ ನಲುವಾಗಿ ಈ ವ್ಯವಸಾಯದ ಇಲಾಖೆಗೆ ಸಾಕಷ್ಟು ಪಂಪ್ ಸೆಟ್‌ಗಳನ್ನೊದಗಿಸುವಂಥ ಒಂದು ವ್ಯವಸ್ಥೆಯನ್ನು ತಾವು ಈಗಲಾದರೂ ಏರ್ಪಾಡು ಮಾಡುವಿರಾ ?

ಡಾ॥ ಆರ್. ನಾಗನಗೌಡ.—ಈಗಲೂ ಕೆಲವು ಸೆಟ್ಟುಗಳನಿಟ್ಟುಕೊಂಡಿದ್ದಾರೆ.

ಶ್ರೀ ಕೆ. ಪ್ರಭಾಕರ್.—ಇರಬಹುದು, ಆದರೆ ಅವುಗಳೊಂದೂ ಸರಿಯಾಗಿ ಕೆಲಸ ಮಾಡುವ ಸ್ಥಿತಿಯಲ್ಲಿಲ್ಲ. ಅವುಗಳೆಲ್ಲಾ ಕೆಟ್ಟುಹೋಗಿರುತ್ತವೆಂಬುದು ತಮ್ಮ ಅವಗಾಹನೆಗಿನ್ನೂ ಬಂದಿಲ್ಲವೇ ?

ಡಾ॥ ಆರ್. ನಾಗನಗೌಡ.—ಹಾಗೆ ಅವುಗಳು ಕೆಟ್ಟುಹೋಗಿದ್ದರೆ ಅವುಗಳನ್ನು ರಿಪೇರಿ ಮಾಡಿಸಲಾಗುವುದು.

ಶ್ರೀ ಕೆ. ಪ್ರಭಾಕರ್.—ಹಾಗಾದರೆ ಇನ್ನು ಮುಂದಕ್ಕಾದರೂ ಸರಿಯಾಗಿ ಕೆಲಸ ಮಾಡಬಲ್ಲಂಥ ಪಂಪ್‌ಸೆಟ್‌ಗಳನ್ನು ರೈತರಿಗೆ ಸಕಾಲಕ್ಕೆ ತಪ್ಪದಹಾಗೆ ಒದಗಿಸಲು ಆ ವ್ಯವಸಾಯದ ಇಲಾಖೆಯಲ್ಲಿ ತಾವು ಒಂದು ಏರ್ಪಾಡನ್ನು ಮಾಡುವಿರಾ?

ಡಾ॥ ಆರ್. ನಾಗನಗೌಡ.—ಖಂಡಿತ ಮಾಡುತ್ತೇವೆ.

Commercial Crops (Expert Survey)

Q.—522. **Sri K. V. BYRE GOWDA** (Bangalore North).—

Will the Government be pleased to state:—

(*a*) whether any survey is being conducted for exporting the surplus commercial crops in the State such as onion, potato, groundnuts, tobacco, etc.;

(*b*) the quantity of the above crops grown in each place during this year?

A.—**Dr. R. NAGAN GOWDA** (Minister for Agriculture).—

(*a*) Yes.

(*b*) Please see the statement appended below.

Statement showing the Districtwise Acreage and Production figures of Onions, Potatoes, Groundnuts and Tobacco for the year 1953-54 (Production in Tons).

Sl. No.	District	Onions		Potatoes	
		Acreage	Production	Acreage	Production
	1	2	3	4	5
1	Bangalore	1,455	4,547	2,725	12,317
2	Kolar	1,770	5,531	2,076	9,382
3	Tumkur	215	672	...	...
4	Mysore	2,149	6,716	328	659
5	Mandya	2,822	8,819	...	...
6	Hassan	1,282	4,006	4,690	9,422
7	Shimoga	49	153	...	...
8	Chikmagalur	1,516	4,737	1,200	2,411
9	Chitaldrug	5,868	16,775	...	...
10	Bellary	493	1,541	...	...
	Total ...	17,119	53,497	11,019	34,191

Sl. No.	District	Groundnuts		Tobacco	
		Acreage	Production	Acreage	Production
		6	7	8	9
1	Bangalore	19,519	9,670	59	63
2	Kolar	59,955	14,987	2 024	445
3	Tumkur	43,780	2,202	1,541	188
4	Mysore	42,185	19,162	17,869	1,858
5	Mandya	21,000	6,549	1,195	225
6	Hassan	3,380	1,235	1,295	140
7	Shimoga	21,694	3,549	126	14
8	Chikmagalur	2,668	139	166	13
9	Chitaldrug	76,023	11,369	2,509	734
10	Bellary	1,52,629	58,429	2,550	892
	Total ...	4,42,833	1,27,191	29,634	4,582